ಪ್ರಭಾವಳಿ, ಜಪಮಾಡುತ್ತಾ ಮಾಡುತ್ತಾ ಸ್ವತಃ ಶ್ರೀರಾಮನಾಗುವ ವಿಪರ್ಯಾಸ, ಬಾಯಿ ವಾಸನೆಯ ಹೆಂಡತಿ... ಹೀಗೆ ಯಾವ ದುರಂತವೂ ಹೊರಗಿನ ಒತ್ತಡದಿಂದ ಬಂದಂತಹುವಲ್ಲ.

ವ್ಯಂಗ್ಯ ನನ್ನ ಕತೆಗಳ ಸ್ಥಾಯೀಭಾವ. ಘಟನೆಗಳನ್ನು, ಕಥಾನಕಗಳನ್ನು ನೇರವಾಗಿ ನೋಡುವುದು ನನ್ನಿಂದ ಆಗದ ಮಾತು. ಮನುಷ್ಯ–ಮನುಷ್ಯನ ಸಂಬಂಧಗಳಲ್ಲಿ, ಗಂಡ–ಹೆಂಡತಿಯರ ಸಂಬಂಧಗಳಲ್ಲಿ, ಮನುಷ್ಯ–ದೇವರ ಸಂಬಂಧಗಳಲ್ಲಿ ನಾನು ವ್ಯಂಗ್ಯ ಹುಡುಕುತ್ತೇನೆ. ಕೇವಲ ವ್ಯಂಗ್ಯದಲ್ಲಿ ಉಡಾಫೆ ಮಾಡುವುದು ನನ್ನ ಪ್ರಯತ್ನವಲ್ಲ. ಅದರ ಹಿಂದೆ ಒಂದು ಅವ್ಯಕ್ತ ನೋವಿನ ಅರಿವುಂಟು ಮಾಡುವುದು ನನ್ನ ಉದ್ದೇಶ. ಇದು ಬಹುಶಃ ನನ್ನ ಕಾಲೇಜು ಮತ್ತು ನಂತರದ ದಿನಗಳ ಬಡತನ, ಬದುಕನ್ನು ಎದುರಿಸಲೇ ಬೇಕಾದ ಅನಿವಾರ್ಯತೆ, ಅಸಹಾಯಕತೆ ಜೀವನವನ್ನು ವ್ಯಂಗ್ಯದಿಂದ ನೋಡುವ ಧೈರ್ಯ ಕೊಟ್ಟಿರಬೇಕು ನನಗೆ. ಹಾಗಾಗಿ ನನ್ನ ಕತೆಗಳಲ್ಲಿ ಇದು ಕಂಡಲ್ಲಿ ಅಚ್ಚರಿಯಿಲ್ಲ.

ಒಂದೆರಡು ವರ್ಷಗಳ ಕೆಳಗೆ ಒಂದು ಸಂವಾದದಲ್ಲಿ ಎಸ್. ದಿವಾಕರ್ ಕೊರ್ತಝಾರ್‌ನ ಒಂದು ಕತೆ ಹೇಳಿದರು. ಹೇಳಿದ್ದಲ್ಲದೇ ಅದನ್ನು ವಿವರಿಸಿದರು. ಕತೆ–ಪಾತ್ರ–ಕತೆಗಾರ–ಓದುಗ ಎಲ್ಲರ ನಡುವಿನ ಗೆರೆಯನ್ನು ಒಂದೇ ಏಟಿಗೆ ಅಳಿಸಿಹಾಕಿಬಿಡುವ ಅದ್ಭುತ ಕತೆ ಅದು. (ಇದೇ ಧಾಟಿಯಲ್ಲಿ ವಿವೇಕ ಶಾನಭಾಗ ಕೂಡಾ ಒಂದು ಕತೆ ಬರೆದಿದ್ದಾರೆ). ಅದಾದ ಕೆಲವು ದಿನಗಳ ನಂತರ ದಿವಾಕರ್ ಸೆಕೆಂಡ್ ಪರ್ಸನ್‌ನಲ್ಲಿ (ಮಧ್ಯಮ ಪುರುಷ ಸರ್ವನಾಮದಲ್ಲಿ) ಬರೆದ ಜಗತ್ತಿನ ಕತೆಗಳ ಪರಿಚಯ ಮಾಡಿಕೊಟ್ಟರು. ಅವತ್ತಿನ ವಿರಾಮದ ವೇಳೆಯಲ್ಲಿ ನಾನು ಬರೆಯತೊಡಗಿದ್ದ ಒಂದು ಕತೆಯನ್ನು ಅವರಿಗೆ ಹೇಳಿದೆ. ಇದ್ದಕ್ಕಿದ್ದಂತೇ, 'ಅದನ್ನು ಸೆಕೆಂಡ್ ಪರ್ಸನ್‌ನಲ್ಲಿ ಬರೀರಿ' ಅಂದು ಬಿಟ್ಟರು. ಕತೆಗಳ ವಿಚಾರದಲ್ಲಿ ನನಗೊಂದು ಹೊಸ ದಾರಿ ತೋರಿಸಿದರು. ಅಲ್ಲಿಂದ ಶುರುವಾಯಿತು ನನ್ನ ಕತೆಗಳ ವಿರುದ್ಧ ದಿಕ್ಕಿನ ಪಯಣ. ಕತೆಯಲ್ಲಿನ ಪಾತ್ರ, ಲೇಖಕ ಮತ್ತು ಓದುಗರ ನಡುವಿನ ಸಂಬಂಧವನ್ನು ಹುಡುಕುತ್ತಿದ್ದೇನೆ. ಈಗ ಕತೆಗಳು ಸ್ವಯಂಭೂ ಹುಟ್ಟುವುದಿಲ್ಲ. ಯೋಚನೆ ಮಾಡಬೇಕಾಗುತ್ತದೆ. ನನ್ನ ನಿಯಮಗಳನ್ನು ನಾನೇ ಮುರಿದುಕೊಳ್ಳುತ್ತಿದ್ದೇನೆ.

ಕೆ.ವಿ. ತಿರುಮಲೇಶ್ ನನ್ನ ಕಾದಂಬರಿಯ ಬಗ್ಗೆ ವಿವರವಾಗಿ ಬರೆದಿದ್ದಾರೆ, ಟಿ.ಪಿ. ಅಶೋಕ ನನ್ನ ಒಂದು ಕತೆಯನ್ನು (ಶನಿಕಾಟದ ಅಂಗಡಿ) ಮತ್ತೆ ಮತ್ತೆ ನೆನಪಿಸುತ್ತಾರೆ, ದಿವಾಕರ್ ಅವರು ಒಂದು ದೀರ್ಘವಾದ ಮುನ್ನುಡಿ ಬರೆದಿದ್ದಾರೆ, ಆಗಾಗ್ಗೆ ಜಯಂತ ಕಾಯ್ಕಿಣಿ ಯಾರನ್ನೋ ತೋರಿಸಿ ನಿಮ್ಮ ಕತೆಯ ಪಾತ್ರ ಇದ್ದಹಾಗಿದ್ದಾನೆ ಎಂದು ಬಿಡುತ್ತಾರೆ, ವಿವೇಕ ಶಾನಭಾಗ ಅವರಿಗೆ ನನ್ನ ಕತೆಗಳು 'ಕಾಣಿಸುವ' ಕತೆಗಳು, ಗಿರಡ್ಡಿ ಗೋವಿಂದರಾಜರಿಗೆ ನನ್ನ ಕತೆಗಳನ್ನು ಓದಿ ಗೊರೂರು ಅವರ ಕತೆಗಳು ನೆನಪಾದವಂತೆ. ಎಲ್ಲಕ್ಕಿಂತಾ ಮಿಗಿಲಾಗಿ ಯು.ಆರ್. ಅನಂತಮೂರ್ತಿಯವರು ಹೇಳಿದ ಮಾತುಗಳನ್ನು – 'ಎಲ್ಲಾ ಊರಿಗೂ ಒಬ್ಬೊಬ್ಬ ಲೇಖಕ ಇರ್ತಾನೆ, ನೀನು ದಾವಣಗೆರೆ ಲೇಖಕ ಕಣಯ್ಯಾ' – ಇಂದಿಗೂ ಜೇಬಿನಲ್ಲಿಟ್ಟುಕೊಂಡು ತಿರುಗುತ್ತೇನೆ. ಅವಾಗಾವಾಗ ಜೇಬಿನಿಂದ ಅವನ್ನು ಹೊರತೆಗೆದು ಕಿವಿಗೆ ಅಂಟಿಸಿಕೊಂಡು ಕೇಳಿ, ರೋಮಾಂಚನಗೊಂಡು ಮತ್ತೆ ಜೇಬಿಗೆ ಸೇರಿಸಿ ಮುಂದುವರೆಯುತ್ತೇನೆ.

**(ಹಲವು ಲೇಖಕರ ಕಥೆಗಾರಿಕೆಯನ್ನು ಪರಿಚಯಿಸಿದ ಈ ಅಂಕಣ ಇಲ್ಲಿಗೆ ಮುಕ್ತಾಯ)**